ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೨

# ಕರ್ನಾಟಕ ವಿಧಾನಸಭೆ

## ಹದಿನೈದನೇ ವಿಧಾನಸಭೆ

## ಎರಡನೇ ಅಧಿವೇಶನ

**ಮಂಗಳವಾರ, ದಿನಾಂಕ: ೧೧ನೇ ಡಿಸೆಂಬರ್, ೨೦೧೮**

---

## ಸಮೂಹ – 'ಆ - B'

೧. ಮಾನ್ಯ ಮುಖ್ಯಮಂತ್ರಿಗಳು

೨. ಮಾನ್ಯ ಉನ್ನತ ಶಿಕ್ಷಣ ಸಚಿವರು

೩. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

---

## ಪದವಿ ಕಾಲೇಜು ಮಂಜೂರಾತಿ

**ಶ್ರೀ ಬಸನಗೌಡ ದದ್ದಲ್ (ರಾಯಚೂರು ಗ್ರಾಮಾಂತರ) –**

೧೬ (೨೧೪) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಯಚೂರು ಗ್ರಾಮೀಣ ಮತಕ್ಷೇತ್ರಕ್ಕೆ ಪದವಿ ಕಾಲೇಜು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಮಂಜೂರಾತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಈ ಮತ ಕ್ಷೇತ್ರದಲ್ಲಿರುವ ಪದವಿ ಕಾಲೇಜುಗಳಿಗೆ ಉಪನ್ಯಾಸಕರು, ಕಟ್ಟಡ ಹಾಗೂ ಇನ್ನಿತರೆ ಮೂಲಭೂತ ಸೌಕರ್ಯಗಳ ಕೊರತೆ ಪರಿಹರಿಸಲು ಕೈಗೊಂಡ ಕ್ರಮಗಳೇನು ;

(ಈ) ಡಾ॥ ಡಿ.ಎಂ. ನಂಜುಂಡಪ್ಪ ವರದಿಯನ್ವಯ ಹೈದ್ರಾಬಾದ್ ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿ ಉನ್ನತ ಶಿಕ್ಷಣ ಇಲಾಖೆಯಿಂದ ಆಗಿದ್ದ ಅಸಮತೋಲನ ನಿವಾರಣೆ ಆಗಿದೆಯೇ ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಉಪನ್ಯಾಸಕರ ಕಡ್ಡಾಯ ವರ್ಗಾವಣೆ

**ಶ್ರೀ ಎಚ್. ಹಾಲಪ್ಪ (ಸಾಗರ) –**

೧೭ (೨೧೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಉಪನ್ಯಾಸಕರ ಕಡ್ಡಾಯ ವರ್ಗಾವಣೆ ನೀತಿಯಿಂದಾಗಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರನ್ನು ವಿನಾಕಾರಣ ವರ್ಗಾವಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ವರ್ಗಾವಣೆಯಿಂದ ತೆರವಾಗಿರುವ ಹುದ್ದೆಗಳಿಗೆ ಉಪನ್ಯಾಸಕರನ್ನು ನೇಮಿಸದಿರುವುದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತುಂಬಾ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ ತೆರವಾದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ? (ವಿವರ ಒದಗಿಸುವುದು)

## ಸಿಬ್ಬಂದಿ ಕೊರತೆ

**ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ ) –**

೧೮ (೩೩೬) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೋಲಾರ ಜಿಲ್ಲೆಯ ಬಂಗಾರಪೇಟೆ ಕ್ಷೇತ್ರದ ಬಂಗಾರಪೇಟೆ ಕಛೇರಿಗೆ ಸಿ.ಡಿ.ಪಿ.ಓ. ಸೇರಿದಂತೆ ವಿವಿಧ ವೃಂದಗಳಲ್ಲಿ ಮಂಜೂರಾದ ಹುದ್ದೆಗಳು ಎಷ್ಟು ; ಅವು ಯಾವುವು ;

(ಆ) ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು ; ತಾಲ್ಲೂಕಿನಾದ್ಯಂತ ಇರುವ ಅಂಗನವಾಡಿಗಳಿಗೆ ಭೇಟಿ ನೀಡಲು ಪ್ರಸ್ತುತ ಇರುವ ಸಿಬ್ಬಂದಿಯಿಂದ ಸಾಧ್ಯವೇ ;

(ಇ) ಮಂಜೂರಾದ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ? (ವಿವರಗಳನ್ನು ನೀಡುವುದು)

## ಕಾಲೇಜು ಕಟ್ಟಡ ನಿರ್ಮಾಣ

**ಶ್ರೀ ಅನಿಲ್ ಕುಮಾರ್ ಸಿ. (ಹೆಚ್.ಡಿ. ಕೋಟೆ) –**

೧೯ (೭೯೦) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹೆಚ್.ಡಿ. ಕೋಟೆ ವಿಧಾನಸಭಾ ವ್ಯಾಪ್ತಿಯಲ್ಲಿ ಇರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡವಿಲ್ಲದೆ ಪ್ರೌಢ ಶಾಲಾ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಕಟ್ಟಡ ನಿರ್ಮಾಣಕ್ಕೆ ಅನುದಾನ ನಿಗದಿಪಡಿಸಲಾಗಿದೆಯೇ ; (ಸಂಪೂರ್ಣ ವಿವರ ನೀಡುವುದು)

(ಇ) ಈ ವಿಧಾನಸಭಾ ವ್ಯಾಪ್ತಿಯ ಪ್ರಥಮ ದರ್ಜೆ ಕಾಲೇಜುಗಳ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

## ಸಿಬ್ಬಂದಿ ನೇಮಕಾತಿ

**ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ) –**

೨೦ (೭೧೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಅಬಕಾರಿ ಇಲಾಖೆಯಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ; (ಕ್ಷೇತ್ರವಾರು ವಿವರ ನೀಡುವುದು)

(ಆ) ಖಾಲಿ ಇರುವ ಹುದ್ದೆಗಳ ನೇಮಕಾತಿಗೆ ಸರ್ಕಾರ ತೆಗೆದುಕೊಂಡ ಕ್ರಮವೇನು; ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು;

(ಇ) ಕಳೆದ ಹತ್ತು ವರ್ಷದ ಹಿಂದಿನಿಂದಲೂ ಹೊರ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು ?

## ಖಾಲಿ ಹುದ್ದೆ ಭರ್ತಿ

**ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ ) –**

೨೧ (೨೦೪) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆಯೆಷ್ಟು ; ಈ ಹುದ್ದೆಗಳು ಎಷ್ಟು ವರ್ಷಗಳಿಂದ ಖಾಲಿಯಿರುತ್ತದೆ ;

(ಆ) ಈ ಹುದ್ದೆಗಳು ಖಾಲಿ ಇರುವುದರಿಂದ ಕಾಲೇಜು ನಡೆಸುವುದು ಕಷ್ಟವಾಗಿದ್ದು, ಹುದ್ದೆಗಳನ್ನು ಭರ್ತಿ ಮಾಡುವುದರ ಬಗ್ಗೆ ಸರ್ಕಾರದ ನಿಲುವೇನು ;

(ಇ) ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ ?

## ಸಮರ್ಪಕ ವಿದ್ಯುತ್

**ಶ್ರೀ ಎಂ.ಎಸ್. ಸೋಮಲಿಂಗಪ್ಪ (ಸಿರಗುಪ್ಪ ) –**

೨೨ (೭೨೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ತೆಕ್ಕಲಕೋಟೆ ಹಾಗೂ ಸಿರುಗುಪ್ಪ ನಗರಗಳಲ್ಲಿ ೧೫೦ಕ್ಕೂ ಹೆಚ್ಚು ರೈಸ್‌ಮಿಲ್‌ಗಳು, ಕಾಟನ್ ಮಿಲ್‌ಗಳು ಹಾಗೂ ಆಯಿಲ್ ಮಿಲ್‌ಗಳು ಇದ್ದು, ತುಂಗಭದ್ರ ಹಾಗೂ ವೇದಾವತಿ ನದಿಗಳಿಗೆ ಅಳವಡಿಸಿರುವ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸಿರುಗುಪ್ಪ ಮತಕ್ಷೇತ್ರಕ್ಕೆ ಸಮರ್ಪಕವಾಗಿ ವಿದ್ಯುತ್ ಸರಬರಾಜು ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು ;

(ಇ) ಸಿರುಗುಪ್ಪ ಮತಕ್ಷೇತ್ರದಲ್ಲಿ ೨೨೦ ಕೆ.ವಿ. ಘಟಕವನ್ನು ಸ್ಥಾಪಿಸುವ ಉದ್ದೇಶ ಇದೆಯೇ ?

## ಮಕ್ಕಳ ಅಪೌಷ್ಠಿಕತೆ

**ಶ್ರೀ ಕೆ. ಶಿವನಗೌಡ ನಾಯಕ್ (ದೇವದುರ್ಗ) –**

೨೩ (೫೧೬) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಯಚೂರು ಜಿಲ್ಲೆಯ ಅಂಗನವಾಡಿ ಕೇಂದ್ರಗಳಲ್ಲಿ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಆ) ಅಪೌಷ್ಠಿಕತೆಯನ್ನು ಹೋಗಲಾಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ; ಅಪೌಷ್ಠಿಕತೆ ಹೋಗಲಾಡಿಸಲು ಪ್ರತಿ ಶಿಶುವಿಗೆ ಖರ್ಚು ಮಾಡುವ ವೆಚ್ಚವೆಷ್ಟು ; ಕಳೆದ ೩ ವರ್ಷಗಳಿಂದ ಇಲ್ಲಿಯವರೆಗೆ ಇದಕ್ಕಾಗಿ ಭರಿಸಲಾದ ಅನುದಾನವೆಷ್ಟು ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಸರ್ವಿಸ್ ಲೈನ್ ಚಾರ್ಜ್

**ಶ್ರೀ ನರಸಿಂಹನಾಯಕ್ (ರಾಜುಗೌಡ) (ಸುರಪುರ) –**

೨೪ (೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರೈತರ ಪಂಪ್ ಸೆಟ್‌ಗಳಿಗೆ ವಿದ್ಯುತ್ ನೋಂದಣಿ ಸಂಖ್ಯೆ (R.R ನಂಬರ್) ಪಡೆಯಲು ಸರ್ವಿಸ್ ಲೈನ್ ಚಾರ್ಜ್ ಎಂದು ರೂ. ೧೦,೦೦೦–೦೦ ಗಳನ್ನು ಪಾವತಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರೈತರು ಸರ್ವಿಸ್ ಲೈನ್ ಚಾರ್ಜ್ ಪಾವತಿಸಲು ಇರುವ ಮಾನದಂಡಗಳೇನು ;

(ಇ) ರೈತರಿಗೆ ಹೊರೆಯಾಗಿರುವ ಸರ್ವಿಸ್ ಲೈನ್ ಚಾರ್ಜ್ ತೆಗೆದುಹಾಕಲು ಸರ್ಕಾರವು ಯಾವ ಕ್ರಮ ಕೈಗೊಳ್ಳುವುದು ?

## ಪದವಿ ಹಾಗೂ ಪಾಲಿಟೆಕ್ನಿಕ್ ಕಾಲೇಜುಗಳ ಮಂಜೂರಾತಿ

**ಶ್ರೀ ಶ್ರೀಮಂತ್ ಬಾಳಾಸಾಹೇಬ್ ಪಾಟೀಲ್ (ಕಾಗವಾಡ) –**

೨೫ (೪೨೧) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪ್ರಸಕ್ತ ಸಾಲಿನಲ್ಲಿ ಕಾಗವಾಡ ವಿಧಾನಸಭಾ ಮತಕ್ಷೇತ್ರಕ್ಕೆ ಹೊಸದಾಗಿ ಪದವಿ ಹಾಗೂ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳನ್ನು ಮಂಜೂರು ಮಾಡುವಂತೆ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಪ್ರಸ್ತಾವನೆ ಯಾವ ಹಂತದಲ್ಲಿದೆ ; ಸದರಿ ಪ್ರಸ್ತಾವನೆ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

## ಗೌರವಧನ ಹೆಚ್ಚಳ

**ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) –**

೨೬ (೬೯) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು ; ಇಲ್ಲಿ ಕಲಿಯುತ್ತಿರುವ ಮಕ್ಕಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ಅಂಗನವಾಡಿ ಕಾರ್ಯಕರ್ತೆಯರಿಗೆ ಸರ್ಕಾರ ನೀಡುತ್ತಿರುವ ಗೌರವ ಧನ ಎಷ್ಟು ; ಗೌರವ ಧನದ ಜೊತೆಗೆ ನೀಡುತ್ತಿರುವ ಇನ್ನಿತರೆ ಸೌಲಭ್ಯಗಳು ಯಾವುವು ;

(ಈ) ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ಗೌರವ ಧನ ಪಾವತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು ; ಸಮಯಕ್ಕೆ ಸರಿಯಾಗಿ ಗೌರವ ಧನ ಪಾವತಿಸಲು ಕೈಗೊಂಡಿರುವ ಕ್ರಮಗಳೇನು ;

(ಉ) ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವ ಧನ ಹೆಚ್ಚಳ ಮಾಡುವ ಕುರಿತು ಸರ್ಕಾರದ ನಿಲುವೇನು ?

## ವಿದ್ಯುತ್ ಕೊರತೆ

**ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸೊರಬ) –**

೨೭ (೮೦೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸೊರಬ ವಿಧಾನಸಭಾ ಕ್ಷೇತ್ರದಲ್ಲಿ ೩ ಫೇಸ್ ವಿದ್ಯುತ್‌ನ್ನು ಎಷ್ಟು ಗಂಟೆಗಳ ಕಾಲ ರೈತರಿಗೆ ಕೊಡಲಾಗುತ್ತಿದೆ ;

(ಆ) ರೈತರಿಗೆ ಅಗತ್ಯವಿರುವಷ್ಟು ವಿದ್ಯುತ್‌ನ್ನು ಪೂರೈಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ಶಿಶು ಅಭಿವೃದ್ಧಿ ಅಧಿಕಾರಿಗಳ ಕಛೇರಿ

**ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ) –**

೨೮ (೮೧೩) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ ಶಿಶು ಅಭಿವೃದ್ಧಿ ಅಧಿಕಾರಿಗಳ (CDPO) ಕಛೇರಿ ಇಲ್ಲದಿರುವುದರಿಂದ ಇಲಾಖೆಯ ಕಾರ್ಯಕ್ರಮಗಳು ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಕಛೇರಿ ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ ;

(ಇ) ಯಾವಾಗ ಮಂಜೂರು ಮಾಡಲಾಗುವುದು ?

## ನೂತನ ವಿಜ್ಞಾನ ಕಾಲೇಜು ಸ್ಥಾಪನೆ

**ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ) –**

೨೯ (೫೨೮) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹುಕ್ಕೇರಿ ತಾಲ್ಲೂಕಿನಲ್ಲಿ ಸರ್ಕಾರಿ ಬಿ.ಎಸ್.ಸಿ. ವಿಜ್ಞಾನ ಕಾಲೇಜು ಇಲ್ಲದೆ, ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ ಹುಕ್ಕೇರಿ ಪಟ್ಟಣದಲ್ಲಿ ಬಿ.ಎಸ್.ಸಿ. ವಿಜ್ಞಾನ ಕಾಲೇಜು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ;

(ಇ) ಬಡ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬಿ.ಎಸ್.ಸಿ. ವಿಜ್ಞಾನ ಕಾಲೇಜು ಸ್ಥಾಪಿಸಲು ಮಂಜೂರಾತಿ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು ಮತ್ತು ಯಾವಾಗ ಕಾಲೇಜು ಮಂಜೂರು ಮಾಡಲಾಗುವುದು ?

## ಸರ್ಕಾರಿ ಶಾಲೆಗಳಲ್ಲಿ ಇಂಗ್ಲೀಷ್ ಭಾಷಾ ಕಲಿಕೆ

**ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ ) –**

೩೦ (೭೯೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಇಂಗ್ಲೀಷ್ ಬೋಧನೆಯನ್ನು ಆರಂಭಿಸುವಲ್ಲಿ ಸರ್ಕಾರದ ಕ್ರಮಗಳೇನು ; ಆ ಕುರಿತಾದ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ; (ವಿವರ ಒದಗಿಸುವುದು)

(ಆ) ಮುಂಬರುವ ಶೈಕ್ಷಣಿಕ ವರ್ಷದಿಂದ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಕುರಿತು ಇಲಾಖೆಯು ಹಮ್ಮಿಕೊಂಡ ಪೂರ್ವಭಾವಿ ಕ್ರಮಗಳೇನು ; ಗ್ರಾಮೀಣ ಪ್ರದೇಶಗಳಲ್ಲಿರುವ ಮಕ್ಕಳ ಇಂಗ್ಲೀಷ್ ಕಲಿಕೆಯು ಆರಂಭದಿಂದಲೂ ವ್ಯವಸ್ಥಿತವಾಗಿರುವಲ್ಲಿ ನುರಿತ ಶಿಕ್ಷಕರ ನೇಮಕ ಅಥವಾ ಶಿಕ್ಷಕ ವೃಂದವನ್ನೇ ಬಳಸಿಕೊಳ್ಳುವ ಕುರಿತ ಕ್ರಮಗಳೇನು ;

(ಇ) ಕನ್ನಡ ಮಾತೃ ಭಾಷೆ ಕಲಿಕೆಯನ್ನು ಪರಿಪೂರ್ಣವಾಗಿ ಬೋಧಿಸುವುದು ಸೇರಿದಂತೆ ಸರ್ಕಾರಿ ಶಾಲೆಗಳ ಶೈಕ್ಷಣಿಕ ಗುಣಮೌಲ್ಯ ವರ್ಧನೆಗಾಗಿ ಜರುಗಿಸಿರುವ ಕ್ರಮಗಳು ಯಾವುವು ?

**ಎಸ್. ಮೂರ್ತಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಸರ್ಕಾರಿ ಮುದ್ರಣಾಲಯ, ಕಾ.ಸೂ. 639 ಪ್ರತಿಗಳು 1800 – ಪಿ2

List of Questions
for Oral Answers

Total No. of
Questions - 15

LIST - 02

# KARNATAKA LEGISLATIVE ASSEMBLY

## FIFTEENTH ASSEMBLY

## SECOND SESSION

## Tuesday, 11th December, 2018

---

GROUP - 'B'

1. Hon'ble Chief Minister.
2. Minister for Higher Education.
3. Minister for Women and Child Development Empowerment of Differently Abled and Senior Citizen and Kannada and Culture.

---

### SANCTIONING OF DEGREE COLLEGE

**Sri Basanagouda Daddal (Raichur Rural) -**

16 (214) Will the Minister for Higher Education be pleased to state:-

(a) whether the proposal for sanctioning of degree college for Raichur rural assembly constituency is before the government ;

(b) if so, the steps taken by the government for sanctioning of degree college;

(c) the steps taken by the government to redress the shortage of lecturers, building and other infrastructure of the the degree colleges in the said assembly constituency;

(d) whether the imbalance caused by the department of higher education in the limits of Hyderabad Karnataka region has been redressed as per Dr. D.M Nanjundappa Report? (complete information be furnished)

## COMPULSORY TRANSFER OF LECTURERS

**Sri H. Halappa (Sagara) -**

17 (210) Will the Chief Minister be pleased to state:-

(a) whether it has come to the notice of the government that the Lecturers who are working in the colleges are unnecessarily transferred due to compulsory transfer policy followed by the department of Pre University Education;

(b) if so, whether it has come to the notice the government that inconvenience being caused to the students as the lecturers have not been appointed to the posts lying vacant due to transfer;

(c) if so, the steps taken by the government to fill up the posts lying vacant? ( details be furnished )

## SHORTAGE OF STAFF

**Sri Narayanaswamy S.N. (Bangarpet) -**

18 (336) Will the Minister for Women and Child Development, Empowerment of Differently Abled and Senior Citizens and Kannada and Culture be pleased to state:-

(a) the number of posts sanctioned in various cadre including C.D.P.O to Bangarapet office in Bangarpet Assembly Constituency of Kolar District; the particulars of the same;

(b) the number of officers and staff working at present; whether it is possible from the existing staff to visit the Anganawadi Centres across the taluk;

(c) the action taken by the government to fill up the sanctioned posts? (details be furnished)

## CONSTRUCTION OF COLLEGE BUILDING

**Sri Anil Kumar C. (H.D. Kote) -**

19 (790) Will the Minister for Higher Education be pleased to state:-

(a) whether it has come to the notice of the government that the government first grade college located in H.D. Kote assembly constituency is running in High School Building without having its own building;

(b) if so, whether the grant has been earmarked for construction of building during the current year; (complete details be furnished)

(c) the steps taken by the government for the improvement of infrastructure of first grade colleges located in the limits of the said assembly constituency ? ( complete details be furnished)

## RECRUITMENT OF STAFF

**Sri Appachu (Ranjan) M.P. (Madikeri) -**

20 (717) Will the Chief Minister be pleased to state:-

(a) the number of posts lying vacant in Excise Department of the State; (constituency wise details be furnished)

(b) the steps taken by the government for recruitment of posts lying vacant; the time by when the vacant posts would be filled up;

(c) the measures taken by the government regarding regularization of staff working on outsource basis since past 10 years?

## FILLING UP OF POSTS LYING VACANT

**Sri J.C. Madhu Swamy (Chikkanayakanahalli) -**

21 (204) Will the Minister for Higher Education be pleased to state:-

(a) the number of posts lying vacant in Aided Degree Colleges of the State; since how many years these posts are lying vacant;

(b) since it is difficult to run these colleges due to vacant of these posts, the stand of the government over filling up of posts ;

(c) the steps taken by the government to fill up the said posts?

## UNINTERRUPTED POWER SUPPLY

**Sri M.S. Somalingappa (Siruguppa) -**

22 (723) Will the Chief Minister be pleased to state:-

(a) whether it has come to the notice of the government that there is a shortage of power supply to the pumpsets installed in Tunga Bhadra and Vedhavati Rivers since there are more than 150 rice mills, cotton mills and oil mills in Tekkalakote and Siruguppa city of Siruguppa assembly constituency ;

(b) if so, the steps that would be taken by the government for uninterrupted power supply to the Siruguppa assembly constituency ;

(c) whether the government has intended to install 220 K.V. unit in Siruguppa assembly constituency?

## MALNUTRITION IN CHILDREN

**Sri K. Shivanagouda Naik (Devadurga) -**

23 (516) Will the Minister for Women and Child Development, Empowerment of Differently Abled and Senior Citizens and Kannada and Culture be pleased to state:-

(a) the number of children who are suffering from malnutrition in Anganawadi centres of Raichur district; (talukwise information be furnished ) ;

(b) the measures taken by the government to eradicate malnutrition; the cost of amount spent for each infant for eradicating malnutrition; the quantum of grants incurred from past 3 years? ( talukwise information be furnished)

**SERVICE LINE CHARGE**

**Sri Narasimha Nayak (Raju gouda) (Shorapur) -**

24 (06) Will the Chief Minister be pleased to state:-

(a) whether it has come to the notice of the government that the farmers have to pay Rs 10,000 to get Electricity Register Number (R R Number) for their pumpset;

(b) the criterion that would be followed by the farmers to pay service line charge;

(c) the steps taken by the government to remove Service Line Charge which is burden to the farmers?

**SANCTIONING OF DEGREE AND POLYTECHNIC COLLEGES**

**Sri Shrimanth Balasaheb Patil (Kagwad) -**

25 (421) Will the Minister for Higher Education be pleased to state:-

(a) whether it has come to the notice of the government that a proposal has been submitted to sanction new degree and government polytechnic colleges to Kagwad assembly constituency during the current year ;

(b) if so, the present stage of said proposal ; the steps taken by the government regarding the said proposal ?

**HONORARIUM HIKE**

**Sri S. Suresh Kumar (Rajajinagara) -**

26 (69) Will the Minister for Women and Child Development , Empowerment of Differently Abled and Senior Citizens and Kannada and Culture be pleased to state:-

(a) the total number of Anganawadi centres in the state; the number of children in the Anganawadi centres; (district wise details be furnished)

(b) the total number of Anganawadi workers who are rendering service in Anganawadi centres of the state; (district wise details be furnished)

(c) the honorarium being paid by the government to Anganawadi workers; the other facilities provided in addition to honorarium;

(d) whether it has come to the notice of the government that the honorarium has not been paid every month; if so, the reasons for the same; the measures taken to pay honorarium in time;

(e) the stand of the government for hiking of honorarium to Anganawadi workers?

## SHORTAGE OF POWER SUPPLY

**Sri S. Kumar Bangarappa (Sorab) -**

27 (803) Will the Chief Minister be pleased to state:-

(a) the total hours of 3 phase electricity being supplied to the farmers in Sorab assembly constituency ;

(b) the steps taken by the government to supply electricity required for the farmers ?

## OFFICE OF CHILD DEVELOPMENT PROJECT OFFICER

**Sri Aravinda Limbavali (Mahadevapur) -**

28 (813) Will the Minister for Women and Child Development, Empowerment of Differently Abled and Senior Citizens and Kannada and Culture be pleased to state:-

(a) whether it has come to the notice of the government that the programmes are slowed down due to non availability of Office of the Child Development Project Officer's in Bengaluru East Taluk;

(b) if so, whether the government has taken steps to sanction the CDPO office;

(c) the time by when it would be sanctioned ?

**OPENING OF NEW SCIENCE COLLEGE**

**Sri Umesh Vishwanath Katti (Hukkeri)** -

29 (528) Will the Minister for Higher Education be pleased to state:-

(a) whether it has come to the notice of the government that the poor students are put to hardship due to non availability of government B.Sc. Science college in Hukkeri taluk;

(b) if so , whether there is a proposal before the government to open B.Sc. Science college in Hukkeri town;

(c) the steps taken by the government to accord sanction for opening of B.Sc. Science college in the interest of poor students and the time by when the college would be sanctioned ?

**ENGLISH AS A MEDIUM OF INSTRUCTION IN GOVERNMENT SCHOOLS**

**Sri Umanath A. Kotian (Moodabidri)** -

30 (798) Will the Chief Minister be pleased to state:-

(a) the measures taken by the government to start english as a medium of instruction from first standard in government schools; whether there is a proposal before the government in this regard; (details be furnished )

(b) the preliminary initiatives taken by the department regarding implementation of said programme from coming academic year; the measures taken to appoint expert

teachers or experienced teachers existing in the caders to provide english as a medium of instruction at government schools in rural areas;

(c) the steps initiated by the government to provide quality education in government schools along with the teaching of kannada language effectively ?

**S. Murthy**
Secretary
Karnataka Legislative Assembly

Government Press, Vikasa Soudha Unit, Bengaluru. PWS-655 - 1300 Copies - (Pi)